(Defendant counsel prays time for cross examination. Time granted).

(Computerized to my dictation in the open court as deposed by the witness.)

**R. O. I. & A. C.,**

**(PRASHANTHI.G)**
**IX Addl. C.C. & S.J., Bengaluru.**

<u>ದಿ:**06-11-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಪಾಟಿಸವಾಲು : ಪ್ರತಿವಾದಿ ಪರ ಶ್ರೀ. ವಿ.ವಿ.ಆರ್ ವಕೀಲರಿಂದ :</u>

1. ನಾನು ಬಿಎಂಟಿಸಿಯಲ್ಲಿ ಕೆಲಸ ಮಾಡುತ್ತಿದ್ದು ಈಗ ನಿವೃತ್ತನಾಗಿದ್ದೇನೆ. 1993 ರಲ್ಲಿ ನಾನು ಬಿಎಂಟಿಸಿಗೆ ಸೇರಿದ್ದೆ. ನಾನು ಕೆಲಸಕ್ಕೆ ಸೇರಿದ್ದ ಪ್ರಾರಂಭದಲ್ಲಿ ನನಗೆ ತಿಂಗಳಿಗೆ ರೂ.1,800/- ಸಂಬಳ ಬರುತ್ತಿತ್ತು. ನಾನು ನಿವೃತ್ತಿ ಹೊಂದುವ ಸಂದರ್ಭದಲ್ಲಿ ನನಗೆ ತಿಂಗಳಿಗೆ ರೂ.52,000/- ಸಂಬಳ ಬರುತ್ತಿತ್ತು.

2. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ ಹಾಗೂ ಮಗಳು ಇದ್ದೇವೆ. ಬಿಎಂಟಿಸಿಯಲ್ಲಿ ಕೆಲಸ ಮಾಡುವುದನ್ನು ಬಿಟ್ಟರೆ ನನಗೆ ನನ್ನ ತಂದೆ ಮಾಡಿರುವ ಆಸ್ತಿಯಲ್ಲಿ ನನಗೆ ಬಾಡಿಗೆ ಬರುತ್ತದೆ. ನನ್ನ ತಂದೆ ನನಗೆ ಕೊಟ್ಟಿರುವ 60*75 ರ ಸೈಟಿನಲ್ಲಿ ನನಗೆ ತಿಂಗಳಿಗೆ ರೂ.1,50,000/- ಬಾಡಿಗೆ ಬರುತ್ತದೆ.

3. ನನ್ನ ಹೆಂಡತಿ ಗೃಹಿಣಿ. ನನ್ನ ಹೆಂಡತಿಗೆ ಯಾವುದೇ ಆದಾಯ ಇಲ್ಲ ಎಂದರೆ ಸಾಕ್ಷಿ ಅವರ ತಾಯಿ ಮನೆಯವರು ಆಕೆಗೆ ಒಂದು ಸೈಟು ನೀಡಿದ್ದು ಅದರಲ್ಲಿ ಅವರಿಗೆ ಬಾಡಿಗೆ ಬರುತ್ತದೆ ಎಂದು ನುಡಿಯುತ್ತಾರೆ. ಅದರಲ್ಲಿ ತಿಂಗಳಿಗೆ ರೂ.40,000/- ಬಾಡಿಗೆ ಬರುತ್ತದೆ.

4. ನನ್ನ ಸಂಬಳ ಹಾಗೂ ಬರುತ್ತಿರುವ ಬಾಡಿಗೆ ಬಗ್ಗೆ ನಾನು ಆದಾಯ ತೆರಿಗೆ ಕಟ್ಟುತ್ತೇನೆ ಮತ್ತು ಆ ಬಗ್ಗೆ ದಾಖಲೆ ನನ್ನ ಬಳಿ ಇದೆ. 2021-22 ರಿಂದ ಇಂದಿನವರೆಗೆ ನಾನು ಯಾವ ರೀತಿಯಾಗಿ ಆದಾಯ ತೆರಿಗೆ ಕಟ್ಟಿದ್ದೇನೋ ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ಅಭ್ಯಂತರ ಇಲ್ಲ.

5. ನಾನು ಕೋಲಾರದ ಬೈರಕೂರು ಹೋಬಳಿ, ಮುಳಬಾಗಿಲು ತಾಲೂಕಿನಲ್ಲಿ ರಾಕ್ ವ್ಯಾಲಿ ವಾಟರ್ ಪಾರ್ಕ್ಸ್ ಎಂಬ ಹೆಸರಿನ ರೆಸಾರ್ಟ್ ನಡೆಸುತ್ತಿದ್ದೇನೆ. ಸದರಿ ರೆಸಾರ್ಟ್ 2 ಎಕರೆ ಜಾಗದಲ್ಲಿದೆ. ಸದರಿ ರೆಸಾರ್ಟ್ 7 ಎಕರೆ ಜಾಗದಲ್ಲಿದೆ ಎಂದರೆ ಸುಳ್ಳು.

6. ಈಗ ನಾನು ನೋಡುತ್ತಿರುವ ದಾಖಲೆ ನನ್ನ ಹೆಂಡತಿಯ ಹೆಸರಿನಲ್ಲಿರುವ ತೀರುವಳಿ ಭೋಗ್ಯ ಪತ್ರದ ದಾಖಲೆಯಾಗಿದ್ದು ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ನಿ.ಡಿ.1 ರಲ್ಲಿ ನಾನು 2 ಕೋಟಿಯ 25 ಲಕ್ಷ ರೂಪಾಯಿಯನ್ನು ನಗದಾಗಿ ಶ್ರೀಮತಿ. ಎಸ್.ಶಿಲ್ಪಾ ಎಂಬುವವರಿಗೆ ನೀಡಿದ್ದೇನೆ ಎಂದು ಬರೆದಿದೆ ಎಂದರೆ ಸರಿ. ಸದರಿ 7 ಎಕರೆ ಜಾಗಕ್ಕೆ ಶಿಲ್ಪಾ ಅವರೇ ಮಾಲೀಕರು ಎಂದರೆ ಸರಿ.

7. ಸದರಿ ರೆಸಾರ್ಟಿನಲ್ಲಿರುವ ಬಾರ್ ಹಾಗೂ ರೂಂಗಳನ್ನು ಪ್ರಸನ್ನಾ ಅವರು ನಡೆಸಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ಸದರಿ ರೆಸಾರ್ಟಿನಲ್ಲಿರುವ ಫುಡ್ ಕೋರ್ಟನ್ನು ಶಿವು ಎಂಬುವವರು ನಡೆಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿ. ಅದರಲ್ಲಿರುವ ವಾಟರ್ ಗೇಮ್ಸ್ ಮತ್ತು ಬೇಕರಿಯನ್ನು ನನ್ನ ಹೆಂಡತಿ ನಡೆಸಿಕೊಂಡು ಹೋಗುತ್ತಿದ್ದಾಳೆ ಎಂದರೆ ಸರಿ. ನಾನು 2022 ರಲ್ಲಿ ರೆಸಾರ್ಟ್ ಖರೀದಿಸುವ ಸುಮಾರು 4-5 ವರ್ಷಗಳ ಮೊದಲಿನಿಂದಲೂ ಅದು ಇದೆ. ನನಗಿಂತ ಮೊದಲು ಸದರಿ ರೆಸಾರ್ಟಿನಲ್ಲಿರುವ ವಾಟರ್ ಗೇಮ್ಸ್ ಮತ್ತು ಬೇಕರಿಯನ್ನು ಯಾರು ನಡೆಸಿಕೊಂಡು ಹೋಗುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನಗಿಂತ ಮೊದಲು ಸದರಿ ರೆಸಾರ್ಟಿನಲ್ಲಿರುವ ವಾಟರ್ ಗೇಮ್ಸ್ ಮತ್ತು ಬೇಕರಿಯನ್ನು ಶಿಲ್ಪಾ ಅವರು ನಡೆಸಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ವಾಟರ್ ಗೇಮ್ಸ್ ಮತ್ತು ಬೇಕರಿಯ ಮ್ಯಾನೇಜ್ ಮೆಂಟನ್ನು ಮಂಜುನಾಥ್ ಎಂಬುವವರು ನಾನು ಖರೀದಿಸುವ ಮೊದಲು ನಡೆಸುತ್ತಿದ್ದರು ಎಂದರೆ ಸರಿ.

8. ನಿ.ಡಿ.1 ರಲ್ಲಿ ಉಲ್ಲೇಖವಾದ 2 ಕೋಟಿಯ 25 ಲಕ್ಷ ರೂಪಾಯಿ ನಾನು ಬೇರೆಯವರಿಂದ ಸಾಲ ತೆಗೆದುಕೊಂಡಿದ್ದೆ. ಸದರಿ 2 ಕೋಟಿಯ 25 ಲಕ್ಷ ರೂಪಾಯಿ ನನ್ನ ಆದಾಯ ತೆರಿಗೆಯಲ್ಲಿ ಉಲ್ಲೇಖ ಆಗಿಲ್ಲ. 2 ಕೋಟಿಯ 25 ಲಕ್ಷ ರೂಪಾಯಿ ಅಲ್ಲದೇ ನಾನು 75 ಲಕ್ಷ ರೂಪಾಯಿಗಳಿಗೆ ಶಿಲ್ಪಾ ಅವರ ಜೊತೆ ಕರಾರು ಪತ್ರ

ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಶಿಲ್ಪಾ ಅವರ ಗಂಡ ಚಂದ್ರಹಾಸ ಅವರು ಸದರಿ ಕರಾರು ಪತ್ರವನ್ನು ಅವರೇ ಇಟ್ಟುಕೊಂಡ ಕಾರಣ ಮತ್ತು ಹಣ ವಾಪಾಸು ಕೊಡದ ಕಾರಣ ನನ್ನ ಹೆಂಡತಿಗೂ ಅವರಿಗೂ ಮನಸ್ತಾಪ ಇತ್ತು ಎಂದರೆ ಸರಿ. 2022 ರಲ್ಲಿ ನಾನು ಖರೀದಿಸಿದ ನಂತರ ನಾನು ಪ್ರತಿವಾದಿಯನ್ನು ಕೂಲಿಗಾಗಿ ಇಟ್ಟುಕೊಂಡಿದ್ದೆ.

9. ವಾಟರ್ ಗೇಮ್ಸಿನ ಪ್ರವೇಶ ದರ ಒಬ್ಬರಿಗೆ ರೂ.400/-. ಅದೇ ರೀತಿ ಮಕ್ಕಳಿಗೆ ಅದು ರೂ.200/- ಆಗಿತ್ತು. ದಿನನಿತ್ಯದ ಆದಾಯ ಹಾಗೂ ಖರ್ಚುಗಳನ್ನು ನಾನು ವಹಿಸುತ್ತಿದ್ದೇನೆ ಎಂದರೆ ಸಾಕ್ಷಿ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಹಣವನ್ನು ನಗದಾಗಿಯೂ ಅದೇ ರೀತಿ ಫೋನ್ ಪೇ ಹಾಗೂ ಗೂಗಲ್ ಪೇ ಮುಖಾಂತರ ಪಡೆಯುತ್ತಿದ್ದೆ ಎಂದರೆ ಸರಿ. ಫೋನ್ ಪೇ ಹಾಗೂ ಗೂಗಲ್ ಪೇಗೆ ನನ್ನ ಫೋನ್ ನಂಬರನ್ನೇ ನೀಡಲಾಗಿತ್ತು. ಸಾಕ್ಷಿ ಮುಂದುವರಿದು ಮಂಜುನಾಥ್ ಅವರ ಫೋನ್ ನಂಬರನ್ನೂ ಸಹ ನೀಡಲಾಗಿತ್ತು ಎಂದು ನುಡಿಯುತ್ತಾರೆ.

10. ನಿ.ಡಿ.1 ರಲ್ಲಿ ನಾನು ಪಕ್ಷಕಾರನಲ್ಲ. ನಿ.ಪಿ.5 ನಾನು ಹಾಜರುಪಡಿಸಿದ ಬ್ಯಾಂಕ್ ಸ್ಟೇಟ್ ಮೆಂಟ್ ಎಂದರೆ ಸರಿ. ನಿ.ಪಿ.5 ರಲ್ಲಿ ಸದರಿ ರೆಸಾರ್ಟಿನಿಂದ ಬಂದ ಆದಾಯ ಕಾಣುತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಹೆಸರಿಗೆ ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ. ರೆಸಾರ್ಟಿನಿಂದ ಬರುತ್ತಿದ್ದ ಆದಾಯ ಮಂಜುನಾಥ್

ಅವರ ಖಾತೆಗೆ ಹೋಗುತ್ತಿತ್ತು ಎಂದರೆ ಸರಿ. ರೆಸಾರ್ಟಿನಿಂದ ಮಂಜುನಾಥ್ ಅವರ ಖಾತೆಗೆ ಬರುತ್ತಿದ್ದ ಹಣದಲ್ಲಿ ಸ್ವಲ್ಪವನ್ನು ನನ್ನ ಹೆಂಡತಿಯ ಖಾತೆಗೂ ಹಾಗೂ ಇನ್ನುಳಿದ ಹಣವನ್ನು ನಗದಾಗಿ ನೀಡುತ್ತಿದ್ದರು ಎಂದರೆ ಸರಿ. ಸದರಿ ರೆಸಾರ್ಟಿನಲ್ಲಿ ನಾವು 7-8 ಜನರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದೆವು. ಅವರ ಹೆಸರು ನನಗೆ ಗೊತ್ತಿಲ್ಲ.

11. ವಾಟರ್ ಗೇಮ್ಸಿಗೆ ಏನೆಲ್ಲಾ ಅಗತ್ಯವಿದೆಯೋ ಅದನ್ನೆಲ್ಲಾ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ನಾವು ಅವನಿಗೆ ಹಣ ಕೊಡುತ್ತಿದ್ದೆವು ಎಂದು ನುಡಿಯುತ್ತಾರೆ. 6 ತಿಂಗಳುಗಳ ಕಾಲ ಪ್ರತಿವಾದಿಗೆ ನಾವು ವಾಟರ್ ಗೇಮ್ಸಿಗೆ ಏನೆಲ್ಲಾ ಅಗತ್ಯವಿದೆಯೋ ಆ ಬಗ್ಗೆ ಪ್ರತಿವಾದಿ ಭರಿಸಿದ್ದಕ್ಕೆ ಹಣ ನೀಡಿಲ್ಲ ಎಂದರೆ ಸರಿಯಲ್ಲ.

12. ನಿ.ಪಿ.5 ರಲ್ಲಿ ದಿನಾಂಕ 23.06.2023 ರಿಂದ ನನ್ನ ಹೆಂಡತಿಯ ಕಡೆಯಿಂದ ಹಣ ಡಿಪಾಸಿಟ್ ಆಗಿದೆ ಎಂದರೆ ಸರಿ. ನನ್ನ ಮತ್ತು ನನ್ನ ಹೆಂಡತಿಯ ಬ್ಯಾಂಕು ಸ್ಟೇಟ್ ಮೆಂಟುಗಳನ್ನು ನಾನೇ ನ್ಯಾಯಾಲಯಕ್ಕೆ ನೀಡಿದ್ದೇನೆ. ನಾನು 4 ಲಕ್ಷ ರೂಪಾಯಿಗಳನ್ನು ಪ್ರತಿವಾದಿಗೆ ಪಾವತಿ ಮಾಡುವ ಮೊದಲು ನನ್ನ ಹೆಂಡತಿಯ ಖಾತೆಯಿಂದ ಪ್ರತಿವಾದಿಯ ಖಾತೆಗೆ 15 ಲಕ್ಷ ರೂಪಾಯಿ ವರ್ಗಾವಣೆಯಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಪ್ರತಿವಾದಿ ಸಾಲ ತೆಗೆದುಕೊಂಡಿದ್ದರು ಎಂದು ನುಡಿಯುತ್ತಾರೆ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

(ಪ್ರಶಾಂತಿ.ಜಿ)
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**